# ಜೊತೆಗೂಡುವೆಯಾ?

ದೃಷ್ಟಿ ನೆಟ್ಟಿದ್ದೇನೆ
ದೂರದಿಗಂತದಲ್ಲಿ
ಹಾದಿಹರಿಯುವ ಗುಂಟ
ನೋಡುತ್ತಲೇ ಇದ್ದೇನೆ.

ನಿತ್ಯವೂ ಇಷ್ಟೇ
ಕಾಣಿಸುವಷ್ಟೇ ಮಿತಿ
ಆದರಾಚೆಗೂ ಇದೆ
ಅರಿವಿನ ವಿಸ್ತಾರ.

ದೂರ ಸಾಗಲು
ಸಿದ್ಧತೆ ಪೂರ್ಣಗೊಂಡಿಲ್ಲ
ನಿಂತಲ್ಲೇ ಚಡಪಡಿಕೆ
ನಿಲ್ಲುವ ಲಕ್ಷಣವೂ ಇಲ್ಲ.

ದೂರ ದೂರ ಸಾಗುವ
ಮೋಡಗಳಾಚೆ ತೇಲುವ
ಪ್ರೇಮಗೀತೆ ಹಾಡುವ
ಕನಸು ಹೆಣೆಯುತ್ತಲೇ ಇದೆ.

ಕಾಲಿಗೆ ಶಕ್ತಿ ಬಂದೀತು
ದೃಷ್ಟಿ ನೇರದ ದಾರಿ ಸವೆದೀತು
ಪ್ರೀತಿಯ ಜೊತೆ ಸಿಕ್ಕೀತು
ದೀರ್ಘ ನಿರೀಕ್ಷೆ ಕೊನೆಯಾದೀತು!

● **ಬೇದ್ರೆ ಮಂಜುನಾಥ**



# ಸಂದಿಗ್ಧ!

ಮಗಳ ಮನೆಗೆ ಹೋದ
ಮನೋರಮೆ ಇಂದು
ಬರುವಳೋ ಬಾರಳೋ
ಈಗ ಮಳೆ ಬರಬಹುದು
ಬಾರದಿರಲೂ ಬಹುದು
ಮಡದಿ, ಎನ್ನ ಮನದನ್ನೆ
ಮನೆ ಸೇರುವ ಮೊದಲೇ
ಮುಳುಗದಿರು ಸೂರ್ಯ
ಮೋಡದಲ್ಲಿ ಮರೆಯಾಗಿ
ಚೆಲ್ಲಾಟವಾಡದಿರು ಕಂಡ್ಯಾ
ಇವಳಿಲ್ಲದೆಯೇ ಮನೆ ಬರಿದು
ನನ್ನೆದೆ ಅಶಾಂತಿಯ ಗೂಡು.
ಮೊಮ್ಮಕ್ಕಳ ಮೋಹದಲಿ
ನನ್ನ ಮರೆತಿರಬಹುದು
ಈ ಹಸಿರ ದಾರಿಯಲಿ
ಮಡದಿ ಬೇಗ ಬರುವಳೇ
ಮೊಮ್ಮಕ್ಕಳೊಡನೆ ಬಂದು
ನನ್ನೆದೆಗೆ ಮುದವ ತರುವಳೇ?

● **ವಿಜಯಾ ಶ್ರೀಧರ್**